**O.S. 282-17 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ L M S, ವಕೀಲರಿಂದಃ**

2. ನಾನು ಬಿ ಎ ವರೆಗೆ ವ್ಯಾಸಂಗ ಮಾಡಿದ್ದೇನೆ. ಮೃತ ಬಸವರಾಜ ಶಿವಪ್ಪ ಶೆಟ್ಟರ ಹಾಗೂ ಸದಾಶಿವಪ್ಪ ಶಿವಪ್ಪ ಶೆಟ್ಟರ ರವರು ಖಾಸಾ ಅಣ್ಣ – ತಮ್ಮಂದಿರು. ಸದಾಶಿವಪ್ಪ ದೊಡ್ಡವರು. ನಮ್ಮ ತಂದೆ ಬಸವರಾಜ ಶಿವಪ್ಪ ಶೆಟ್ಟರ. ನಮ್ಮ ತಂದೆ ಇದೇ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದರು. ಬಿಡನಾಳ ಗ್ರಾಮದಲ್ಲಿ ನಮ್ಮ ತಂದೆಗೆ ಒಂದು ಕೃಷಿ ಜಮೀನು ಇತ್ತು. ಅರ್ಧ ಎಕರೆ ಇತ್ತು. ಅರ್ಧ ಎಕರೆ ಖಾಲಿ ಬಿದ್ದಿತ್ತು. ನಮ್ಮ ತಂದೆ ದಿಃ 21.01.2001 ರಲ್ಲಿ ಮರಣ ಹೊಂದಿದರು ಅಂದರೆ ಸರಿ. ನಾಗರತ್ನ ಬಸವರಾಜ ಶೆಟ್ಟರ ರವರು ನಮ್ಮ ತಾಯಿ. 2020-21 ರಲ್ಲಿ ಆಗಸ್ಟ ತಿಂಗಳಲ್ಲಿ ನಮ್ಮ ತಾಯಿ ಮರಣ ಹೊಂದಿದ್ದಾರೆ. ನಾಗರತ್ನ ಈ ಪ್ರಕರಣದಲ್ಲಿ ಒಂದನೇ ಪ್ರತಿವಾದಿ ಅಂದರೆ ಸರಿ. ನಮ್ಮ ತಾಯಿ ಮರಣ ಹೊಂದಿದ ನಂತರ ಈ ದಾವೆಯಲ್ಲಿ ಅವರನ್ನು ಕೈಬಿಡಲಾಗಿದೆ ಅಂದರೆ ಸರಿ. ಬಸವರಾಜ ಶಿವಪ್ಪ ಶೆಟ್ಟರ ರವರು ನಮ್ಮ ಮನೆತನದ ಮೂಲ ಪುರುಷ ಅಂದರೆ ಸರಿ. ಬಸವರಾಜ ಶಿವಪ್ಪ ಶೆಟ್ಟರ ರವರಿಗೆ ಪ್ರತಿವಾದಿ 2 ರಿಂದ 6 ಹಾಗೂ ಪೋತಿ ಶಿವಶಂಕರ ಶೆಟ್ಟರ ರವರು ಮಕ್ಕಳು ಅಂದರೆ ಸರಿ. ನಮ್ಮ ತಂದೆಗೆ ಮೇಲೆ ಹೇಳಿದ 6 ಜನ ವಾರಸುದಾರರನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ. ಶಿವಶಂಕರ ಬಸವರಾಜ ಶೆಟ್ಟರ ರವರು ನನ್ನ ತಮ್ಮ ಅಂದರೆ ಸರಿ. ಇವರು ದಿಃ 05.11.2015 ರಂದು ಮರಣ ಹೊಂದಿದ್ದಾರೆ ಅಂದರೆ ಸರಿ. ವಾದಿ ನಂಃ 1 ಹಾಗೂ 2 ರವರು ಶಿವಶಂಕರ ರವರ ಹೆಂಡತಿ ಹಾಗೂ ಮಗ ಅಂದರೆ ಸರಿ. 5 ನೇ ಪ್ರತಿವಾದಿಗೆ ಸರ್ವಮಂಗಳಾ ಅಲಿಯಾಸ್ ಮಂಗಳಾ ಅಂತಾ ಕರೆಯುತ್ತಾರೆ ಅಂದರೆ ಸರಿ. ನಮ್ಮ ತಂದೆ ಜೀವಂತವಿದ್ದಾಗ ಅವರೆ ಮನೆತನ ನಡೆಸುತ್ತಿದ್ದರು ಅಂದರೆ ಸರಿ. ಭವಾನಿನಗರದಲ್ಲಿರುವ ಮನೆ ಹಾಗೂ ಗುರುದತ್ತನಗರದಲ್ಲಿರುವ ಒಂದು ಕಾಂಪ್ಲೆಕ್ಸ ಈ ದಾವೆಯಲ್ಲಿ ಸೇರಿಸಿಲ್ಲ. ಈ ಎರಡು ಆಸ್ತಿಗಳ ಬಗ್ಗೆ ಕೌಂಟರ ಕ್ಲೇಮದಲ್ಲಿ ಹಿಸ್ಸಾ ಕೇಳಿದ್ದೇನೆ. ವಾದಿಗಳು ಈ ಎರಡು ಆಸ್ತಿಗಳು ಸ್ವಂತ ಆಸ್ತಿ ಅಂತಾ ತಕರಾರಿನಲ್ಲಿ ಹೇಳಿದ್ದಾರೆ ಅಂದರೆ ಸರಿ. ಬಸವರಾಜ ಶಿವಪ್ಪ ಶೆಟ್ಟರ ರವರು ಹಾಗೂ ಸದಾಶಿವಪ್ಪ ಶಿವಪ್ಪ ಶೆಟ್ಟರ ರವರ ನಡುವೆ ಆದ ಪಾಲು ವಿಭಾಗದಲ್ಲಿ ದಾವಾ ಆಸ್ತಿ ಕ್ರಮ ಸಂಖ್ಯೆ 1 ರಿಂದ 6 ಬಸವರಾಜ ಶೆಟ್ಟರ ರವರಿಗೆ ಬಂದಿವೆ ಅಂದರೆ ಸರಿ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಅಂದರೆ ಸರಿ.

**O.S. 282-17** **DW-1**

ನಮ್ಮ ತಂದೆ 3 ಜನ ಹೆಣ್ಣು ಮಕ್ಕಳ ಮದುವೆ ಮಾಡಿದ್ದಾರೆ. ನನ್ನ ಮದುವೆಯನ್ನು ನಾನೇ ಮಾಡಿಕೊಂಡಿದ್ದೇನೆ. ನಮ್ಮ ತಂದೆ ಮರಣ ಹೊಂದಿದ ನಂತರ ಮನೆತನದ ವ್ಯವಹಾರವನ್ನು ಶಿವಶಂಕರ ಶೆಟ್ಟರ ರವರು ಮಾಡುತ್ತಿದ್ದರು. ನನ್ನ ಖರ್ಚಿನಿಂದ ನಾನೇ ಮದುವೆ ಮಾಡಿಕೊಂಡಿದ್ದೇನೆ. ನನ್ನ ಮದುವೆಯ ಖರ್ಚನ್ನು ಶಿವಶಂಕರ ರವರು ನೋಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ನನ್ನ ಮದುವೆಗಿಂತ ಮುಂಚೆ ನನ್ನ ಗಂಡನ ಮನೆ ಬಗ್ಗೆ ಶಿವಶಂಕರ ರವರು ವಿಚಾರ ಮಾಡಿದ್ದಾರೆ. 4 ಜನ ಹೆಣ್ಣು ಮಕ್ಕಳನ್ನು ಸೀರಿವಂತರ ಮನೆಗೆ ಮದುವೆ ಮಾಡಿಕೊಟ್ಟಿದ್ದಾರೆ ಅಂದರೆ ಸರಿ. 4 ಜನ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಆರಾಮವಾಗಿದ್ದೇವೆ ಅಂದರೆ ಸರಿ. ತಾಡಪತ್ರಿಗಲ್ಲಿಯಲ್ಲಿರುವ ಬಿ–ಶೆಡ್ಯೂಲ್ – 1 ನೇ ಆಸ್ತಿ ದಿಃ 17.03.2005 ರಂದು ನೋಂದಾಯಿತ ಪಾಲುವಿಭಾಗದ ಮೂಲಕ ವಾಟ್ನಿಯಾಗಿದೆ ಅಂದರೆ ಸರಿ. ವಾಟ್ನಿ 7 ಜನರ ನಡುವೆ ಆಗಿದೆ. ಕ್ರಮಸಂಖ್ಯೆ 1 ದಾವಾ ಆಸ್ತಿ, ಪ್ರತಿವಾದಿ ನಂಃ 1, 2, 4 ಹಾಗೂ ಮೃತ ಶಿವಶಂಕರ ಶೆಟ್ಟರ ರವರ ಪಾಲಿಗೆ ಬಂದಿದೆ ಅಂದರೆ ಸರಿ. ಪ್ರತಿವಾದಿ ನಂಃ 3, 5 ಹಾಗೂ 6 ರವರಿಗೆ 18 ತೊಲೆ ಬಂಗಾರ ಹಾಗೂ 1 ವರೆ ಲಕ್ಷ ರೂ. ಕೊಡಲಾಗಿದೆ ಅಂದರೆ ಸರಿ. ಪ್ರತಿವಾದಿ ನಂಃ 3, 5 ಹಾಗೂ 6 ರವರು ಕ್ರಮಸಂಖ್ಯೆ 1 ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿ. ನಮ್ಮ ಮನೆತನದ ಒಳಿತಿಗಾಗಿ ಶಿವಶಂಕರ ಶೆಟ್ಟರ ರವರು ಸಾಲ ಮಾಡಿದ್ದರು ಅಂದರೆ ಸರಿ. ಶವಶಂಕರ ಶೆಟ್ಟರ ರವರಿಗೆ ಬ್ಯಾಂಕಿನ ಸಾಲವನ್ನು ತೀರಿಸಲು ಆಗಲಿಲ್ಲ ಅಂದರೆ ಸರಿ. ಈ ಸಾಲ ಎನ್ ಪಿ ಎ ಆಯಿತು. ಶಿವಶಂಕರ ರವರು ಮರಣ ಹೊಂದಿದ ನಂತರ ಎನ್ ಪಿ ಎ ಆಯಿತು. ಉಳಿದವರು ಯಾರು ಬ್ಯಾಂಕಿನ ಸಾಲವನ್ನು ತಿರುವಳಿ ಮಾಡಲು ಪ್ರಯತ್ನ ಮಾಡಲಿಲ್ಲ. ದಾವಾ ಆಸ್ತಿಯ ಕ್ರಮಸಂಖ್ಯೆ 2 ನ್ನು ಪ್ರತಿವಾದಿ 1 ರಿಂದ 6 ರವರು ತಮ್ಮ ಪಾಲಿನ ಶೇಕಡಾ 6/7 ಅಂಶದಷ್ಟು ಅವಿಭಾಜ್ಯ ಹಕ್ಕನ್ನು ದಿಃ 30.03.2017 ರಂದು ಮಾರಾಟ ಮಾಡಿದ್ದರು ಅಂದರೆ ಸರಿ. 1 ನೇ ವಾದಿಯ ಮೌಖಿಕ ಅನುಮತಿಯನ್ನು ಮೇಲೆ ಹೇಳಿದ ಆಸ್ತಿಯನ್ನು ಮಾರಾಟ ಮಾಡುವಾಗ ತೆಗೆದುಕೊಂಡಿದ್ದೆವು. ನಾವು ಮೌಖಿಕ ಅನುಮತಿ ಪಡೆದಿದ್ದೆವು ಅಂತಾ ಪ್ರತಿವಾದಿ ಪತ್ರದಲ್ಲಿ ಹಾಗೂ ಸಾಕ್ಷಿಯಲ್ಲಿ ಹೇಳಿಲ್ಲ. ವಾದಿಗಳ ಕಡೆಯಿಂದ ಮೌಖಿಕ ಅನುಮತಿ ಪಡೆದಿದ್ದೆವು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 2 ರಲ್ಲಿ ವಾದಿಗಳಿಗೆ ಶೇಕಡಾ 1/7 ರಷ್ಟು ಪಾಲು ಇದೆ ಅಂದರೆ ಸರಿ. ದಾವಾ ಆಸ್ತಿ ಕ್ರಮಸಂಖ್ಯೆ 2 ರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿ.

**O.S. 282-17** **DW-1**

ದಾವಾ ಆಸ್ತಿ ಕ್ರಮಸಂಖ್ಯೆ 2 ರಲ್ಲಿ ಒಂದ ಮಹಡಿಯಲ್ಲಿ ಶೇಕಡಾ 6/7 ರಷ್ಟು ಭಾಗವನ್ನು ಪ್ರತಿವಾದಿ ನಂಃ 7 ರವರಿಗೆ ಮಾರಾಟ ಮಾಡಿದ್ದೇವೆ. ಖರೀದಿ ಪತ್ರದಲ್ಲಿ ಮೊದಲನೇ ಮಹಡಿ ಅಂತಾ ಇದೆ. ಖರೀದಿ ಪತ್ರದ ಪುಟ ನಂಃ 4 ಪ್ಯಾರಾ ನಂಃ 1 ರಲ್ಲಿ 1 ನೇ ಮಹಡಿ ಅಂತಾ ಇಲ್ಲ ಅಂದರೆ ಸರಿ. ವಾದಿಗಳ ಶೇಕಡಾ 1/7 ರಷ್ಟು ಭಾಗವನ್ನು ನಾವು ಮಾರಾಟ ಮಾಡಿಲ್ಲ. ದಾವಾ ಆಸ್ತಿ ಕ್ರಮಸಂಖ್ಯೆ 2 ರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ.ಕ್ರಮಸಂಖ್ಯೆ 3 ಆಸ್ತಿಯನ್ನು ಪ್ರತಿವಾದಿ ನಂಃ 3, 5 ಹಾಗೂ 6 ರವರು 1 ನೇ ವಾದಿಯ ಗಂಡನಿಗೆ ಹಾಗೂ ಪ್ರತಿವಾದಿ ನಂಃ 1, 2 ಹಾಗೂ 4 ರವರಿಗೆ ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿ. ನೋಂದಾಯಿತ ಹಕ್ಕು ಬಿಟ್ಟುಕೊಟ್ಟ ಪತ್ರ ದಿಃ 09.07.2004 ರಂದು ಆಗಿದೆ ಅಂದರೆ ಸರಿ. ದಾವಾ ಆಸ್ತಿ ಕ್ರಮಸಂಖ್ಯೆ 3 ರಲ್ಲಿ ವಾದಿಗಳಿಗೆ ಶೇಕಡಾ 1/4 ಅಂಶ ಪಾಲು ಇದೆ ಅಂದರೆ ಸರಿ. 1994 ರಲ್ಲಿ ನಾನು ಸ್ಟೇಟ ಬ್ಯಾಂಕ ಟ್ರ್ಯಾವಂಕೂರ ದಲ್ಲಿ ನೌಕರಿ ಸೇರಿದ್ದೆನು. ಈಗ ಅದು ಎಸ್ ಬಿ ಐ ಬ್ಯಾಂಕ ಆಗಿ ಪರಿವರ್ತನೆಯಾಗಿದೆ. ಆಗ ನಾನು ಕ್ಲರ್ಕ ಆಗಿ ನೌಕರಿ ಸೇರಿದ್ದೆನು. 1994 ರಲ್ಲಿ ನನಗೆ ತಿಂಗಳಿಗೆ 3000/- ಸಂಬಳ ಇತ್ತು ಅಂದರೆ ಸರಿ. 1994 ರಲ್ಲಿ ನನ್ನ ಮದುವೆಯಾಗಿರಲಿಲ್ಲ. ದಿಃ 24.06.2010 ರಂದು ನನ್ನ ಮದುವೆಯಾಗಿದೆ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.